ಬಸ್ಸಿನಲ್ಲಿ ಬೇಕಾದಷ್ಟು ಖಾಲಿ ಸೀಟುಗಳಿತ್ತು. ಬಸ್ಸು ಮಂಗಳೂರು ಬಿಟ್ಟು ಕಾಸರಗೋಡು ದಾರಿ ಹಿಡಿದು ತಲಪ್ಪಾಡಿ ಸಮೀಪಿಸಿ, ಕಣ್ಣಂಚಿಗೆ ನಿಲುಕುವ ಕಡಲ ಗಾಳಿ ಮುಖಕ್ಕೆ ಬಡಿಯಲಾರಂಭಿಸಿದರೂ ಫಕೀರಿಚ್ಚನ ಮನಸು ವಿಚಿತ್ರ ಅಶಾಂತಿಯಿಂದ ಚಡಪಡಿಸುತ್ತಿತ್ತು. ಎಂತದಕ್ಕು ಇವತ್ತು ಸಂಜೆಯೇ ಆ ಡಾಕ್ಟ್ರಮ್ಮನನ್ನು ಕಾಣ್ಬೇಕು ಅನ್ನುವ ತೀರ್ಮಾನ ಮಾಡಿದ ಮೇಲೆಯೇ ಸ್ವಲ್ಪ ಸಮಾಧಾನದಲ್ಲಿ ಉಸಿರಾಡುವಂತಾಗಿದ್ದು ಫಕೀರಿಚ್ಚನಿಗೆ. ಈಗ ಪಕ್ಕದಲ್ಲಿದ್ದ ಶಿವಯ್ಯನ ನೆನಪಾಗಿ ಏನೋ ಹೇಳಬೇಕೆಂದುಕೊಂಡು ಅವನತ್ತ ನೋಡಿದರೆ ಆತ ತೂಕಡಿಸುತ್ತಿದ್ದ.

★★★

ಕೋಪ, ದುಃಖ, ಅವಮಾನಗಳಿಂದ ಮೈ ನರಗಳೆಲ್ಲ ಈಗ ಒಡೆಯುತ್ತದೇನೋ ಅನಿಸುತ್ತಿತ್ತು ಸುರೇಶನಿಗೆ. ಕುಸುಮ ಅಳು ತಡೆದುಕೊಳ್ಳಲು ಗಳಿಗೆಗೊಮ್ಮೆ ಸೆರಗನ್ನು ಬಾಯಿಗೆ ಒತ್ತಿ ಹಿಡಿಯುತ್ತಿದ್ದಳು. ಪೊಲೀಸರು ಆ ಜೋಡಿಯನ್ನು ಕೋರ್ಟ್ ಆವರಣದೊಳಗೆ ಕರೆತರುತ್ತಿದ್ದಂತೆ ಗುಜುಗುಜು ಜೋರಾಯಿತು. ಕುಸುಮ ಮಗಳತ್ತ ಧಾವಿಸಲು ಹೆಜ್ಜೆ ಎತ್ತಿಟ್ಟವಳು ರಕ್ಷಾಳ ಅವತಾರವನ್ನು ಕಂಡು, ಸುರೇಶನನ್ನು ಹಿಡಿದಲುಗಿಸಿ ಅತ್ತ ಕೈ ತೋರಿಸುತ್ತ ಕರೆಂಟ್ ತಂತಿಗೆ ಸಿಕ್ಕಿದ ಗುಬ್ಬಚ್ಚಿಯಂತೆ ಕಂಪಿಸಿ ಕುಸಿದಳು. ಕಪ್ಪು ಪರದೆಯೊಳಗೆ ಅಡಗಿದಂತಿದ್ದ ಮಗಳನ್ನು ನೋಡಿದ್ದೇ ನಖಶಿಖಾಂತ ಉರಿದ ಸುರೇಶ ಹೆಂಡತಿಯ ಅವಸ್ಥೆಯನ್ನೂ ಮರೆತು ರಕ್ಷಾಳತ್ತ ಧಾವಿಸಿದ. ಫಕೀರಿಚ್ಚ ಪರಿಸ್ಥಿತಿ ಕೈ ಮೀರಿ ಹೋದ ಅಸಹಾಯಕತೆಯಿಂದ ಜೋಲುಮೋರೆಯಲ್ಲಿ ನಿಂತಿದ್ದರೂ ಸುರೇಶನ ಮೇಲೊಂದು ಕಣ್ಣಿಟ್ಟಿದ್ದರಿಂದ ಮುಂದಿನ ಅನಾಹುತ ಗ್ರಹಿಸಿ ಸುರೇಶನ ಎರಡೂ ಭುಜಗಳನ್ನೂ ಹಿಡಿದು ನಿಲ್ಲಿಸಿದ. ಅಲ್ಲಲ್ಲಿ ನಿಂತಿದ್ದ ಬಂಧುಗಳೂ ಓಡಿ ಬಂದರು. ಒಂದಿಬ್ಬರು ಕುಸುಮಳತ್ತ ಧಾವಿಸಿದರೆ ಮಿಕ್ಕವರು ಸುರೇಶನನ್ನು ಸುತ್ತುವರಿದರು. ಮೊನ್ನೆಯಷ್ಟೆ ಹುಟ್ಟಿದ ಹಬ್ಬಕ್ಕೆ ಗೆಳತಿಯರಿಗೆ ಐಸ್‌ಕ್ರೀಮ್ ಕೊಡಿಸಲಿದೆಯೆಂದು ಹೊರಟು ನಿಂತವಳು ಇವಳೆಯಾ? ಜೀನ್ಸ್‌ಪ್ಯಾಂಟ್, ಗುಲಾಬಿ ಬಣ್ಣದ ಸಣ್ಣ ತೋಳಿನ ಕುರ್ತಾ ತೊಟ್ಟು, ಕೂದಲನ್ನು ಭುಜದ ಮೇಲೆ ಹಾರಿಸಿ ಹೇಗೆ ಕಾಣ್ತೇನೆ ಪೊಪ್ಪಾ ಎಂದು ಕೇಳಿ; ಹೀಗೆಲ್ಲ ಬಟ್ಟೆ ಹಾಕಿಕೊಂಡು ಪೇಟೆ ಸುತ್ತಬೇಡ ಎಂದು ತನ್ನಿಂದ ಬೈಸಿಕೊಂಡ ಮೇಲೂ, ನೀನು ಯಾವ ಕಾಲದಲ್ಲಿದ್ದಿ ಪೊಪ್ಪಾ? ನಾನು ಹೀಗೇ ಹೋಗುವವಳು ಎಂದು ಹೋದ ಹುಡುಗಿ ಇವಳೆಯಾ?... ರಾತ್ರಿಯೆಲ್ಲ ಗಂಡ ಹೆಂಡತಿ ಕಣ್ಣು ಮುಚ್ಚಿರಲಿಲ್ಲ. ಸುತ್ತಣ ನಾಲ್ಕು ಸೀಮೆಯ ದೇವಾನುದೇವತೆಗಳನ್ನು, ಇಷ್ಟದೈವ ಭಗವತಿಯಮ್ಮಳ ಜೊತೆಗೆ ತರವಾಡಿನ ದೈವಗಳನ್ನೆಲ್ಲ ಸ್ಮರಿಸುತ್ತಲೇ ಇದ್ದರು. ಭಗವತೀ, ಮಗಳಿಗೆ ನಮ್ಮೊಂದಿಗೆ ಬರುವ ಬುದ್ಧಿ ಕೊಡು. ಮನೆತನದ ಮರ್ಯಾದೆ ಕಾಪಾಡು. ತರವಾಡಿನ ದೈವಗಳಿಗೆಲ್ಲಾ ಸೇರಿಸಿಯೇ ಮೂರು ದಿನದ ಕೋಲ ಕೊಡ್ತೇನೆ. ಸೀಮೆಯ ಎಲ್ಲಾ ದೇವಸ್ಥಾನಗಳ ಕೆರೆಯಲ್ಲು ಮಗಳೊಂದಿಗೆ ತೀರ್ಥಸ್ನಾನ ಮಾಡ್ತೇವೆ ಎಂದು ಹರಕೆ ಹೊತ್ತ ಮೇಲೆ ಹುಟ್ಟಿಕೊಂಡ ಆಸೆಯ ಬಳ್ಳಿಗೆ ನೇತುಕೊಂಡೇ ಅವರು ಕೋರ್ಟಿಗೆ ಬಂದಿದ್ದರು. ಆದರೀಗ, ಆ ಕೊನೆಯ ಭರವಸೆ ಇಂಗಿ, 'ಆಯ್ತು... ಎಲ್ಲ ಮುಗಿಯಿತು...' ಅಂದುಬಿಟ್ಟಿತು ಅವನೊಳಗು. ಹೊಟ್ಟೆಯೊಳಗಿಂದ ಛಿಲ್ಲನೆ ಹೊರಟ ತಣ್ಪು ಪಾದಗಳಿಗೆ ನುಗ್ಗಿ ಅಂಗಾಲುಗಳು ತಣ್ಣಗೆ ಕೊರೆಯುವ ಅನುಭವ. ಕುಸಿಯುತ್ತಿರುವ ಶರೀರವನ್ನು ಸಾವರಿಸಲು ಕಟ್ಟೆ ಮೇಲೆ ಕುಳಿತ ಸುರೇಶ. ಮೂರು ತಿಂಗಳಿನಲ್ಲಿ ಏನೇನಾಗಿ ಹೋಯ್ತು! ಒಂದಿಬ್ಬರು ಪರಿಚಯದವರು 'ನಿನ್ನ ಮಗಳನ್ನು ಮಿಲ್ಲಿನ ಮೊಯಿದಿನ್ಬಾವಾನ ಮಗ ಮಂಗಳೂರಿನಲ್ಲಿ ಫರ್ನಿಚರ್ ಅಂಗಡಿ ನೋಡಿಕೊಳ್ಳುವ ಆರಿಫನೊಟ್ಟಿಗೆ ಪೇಟೆಯಲ್ಲಿ ಕಂಡಿದ್ದೇನೆ. ಈ ಕಾಲದಲ್ಲಿ ಯಾರನ್ನು ನಂಬುವ ಹಾಗಿಲ್ಲ. ಹೆಣ್ಣು